ಕರ್ನಾಟಕ ಸರ್ಕಾರ

(ಜಲಾನಯನ ಅಭಿವೃದ್ಧಿ ಇಲಾಖೆ)

ಸಂ: ಜಲಅಇ/ಉಕೃನಿ/ಕೃಅ2/PMKSY-WD/ಕೃಅ2/ಅಬಿ/22/20-21

ಆಯುಕ್ತರ ಕಾರ್ಯಾಲಯ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ,ಕೆ.ಎಚ್.ಬಿ. ಸಂಕೀರ್ಣ
ಕಾವೇರಿ ಭವನ, ಕೆ.ಜಿ.ರೋಡ್
ಬೆಂಗಳೂರು-560009
ದಿನಾಂಕ:10.08.2020

# ಕಛೇರಿ ಆದೇಶ

**ವಿಷಯ:** 2020-21 ನೇ ಸಾಲಿಗೆ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ ಕಾರ್ಯಕ್ರಮದಡಿ ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**

1. ಈ ಕಛೇರಿಯ ಪತ್ರ ಸಂಖ್ಯೆ:ಜಲಅಇ/ಲೆಕ್ಕ-5/ಲೆಕ್ಕ ಪತ್ರ ಸಮಿತಿ/2018-19, ದಿನಾಂಕ:03.11.2018, 15.12.2018 & 11.01.2019
2. ದಿನಾಂಕ:26.06.2020 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಹಾಗೂ ಕೃಷಿ ಉತ್ಪನ್ನ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಜರುಗಿದ ಅಂತರ ಇಲಾಖಾ ಕಾರ್ಯತಂಡ (IDWG) ಸಭೆಯ ನಡವಳಿಗಳು
3. ಈ ಕಛೇರಿಯ ಪತ್ರದ ಸಂಖ್ಯೆ: ಜಲಅಇ/ಉಕೃನಿ/ಕೃಅ2/AAP/PMKSY-WDC/12/20-21, ದಿನಾಂಕ:17.06.2020, 01.07.2020, 6.08.2020
4. ಜಕೃನಿ/ಬೆಂ.ಜಿ/PMKSY-WD/ಅಬಿ/2020-21, ದಿನಾಂಕ:05.08.2020
5. ಅಧೀ-1/PMKSY-WD/B3&B4/ಅನುದಾನ/ಬೇಡಿಕೆ/2020-21, ದಿನಾಂಕ:06.08.2020
6. ಜಕೃನಿ/ಹಾ/ತಾಂ-2/PMKSY-WD-B-3/2020-21, ದಿನಾಂಕ:05.08.2020
7. ಜಕೃನಿ/ಮ/ತಾಂ.ಅ/ಪ್ರಮುಕೃಸಿಂ/ಅ.ಬೇ/2020-21, ದಿನಾಂಕ:29.07.2020
8. ಕೃಅ-1/WD/ಅ.ಬಿ/2020-21, ದಿನಾಂಕ:05.08.2020

*****

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:26.06.2020 ರಂದು **ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಹಾಗೂ ಕೃಷಿ ಉತ್ಪನ್ನ ಆಯುಕ್ತರು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಜರುಗಿದ ಅಂತರ ಇಲಾಖಾ ಕಾರ್ಯತಂಡ (IDWG)** ಸಭೆಯಲ್ಲಿ 2020-21 ನೇ ಸಾಲಿಗೆ PMKSY-WDC ಯೋಜನೆಯಡಿ ಒಟ್ಟು ರೂ.3555.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. (ಉಲ್ಲೇಖ-2)

ಮುಂದುವರೆದು ಉಲ್ಲೇಖಿತ ಪತ್ರ (3) ರಲ್ಲಿ 2020-21 ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC) ಕಾರ್ಯಕ್ರಮದಡಿ ಜಿಲ್ಲಾವಾರು ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಉಲ್ಲೇಖಿತ ಪತ್ರ (4) ರಿಂದ (8) ರಲ್ಲಿ ಜಂಟಿ ಕೃಷಿ ನಿರ್ದೇಶಕರು, **ಬೆಂಗಳೂರು, ಚಾಮರಾಜನಗರ, ಹಾಸನ, ಕೊಡಗು ಮತ್ತು ಶಿವಮೊಗ** ಜಿಲ್ಲೆಗಳಿಂದ ಈ ಯೋಜನೆಯ ಚಟುವಟಿಕೆಗಳಿಗೆ ವೆಚ್ಚ ಭರಿಸಲು ಒಟ್ಟು ರೂ.257.95 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

11-08-2020

ಈ ಹಿನ್ನೆಲೆಯಲ್ಲಿ ಕೇಂದ್ರ ಕಛೇರಿಯ SLNA ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ.207.96 ಲಕ್ಷಗಳನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಿ ಆದೇಶಿಸಿದೆ.

## ಆದೇಶ

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC) ಕಾರ್ಯಕ್ರಮದಡಿ ರೂ.207.96 ಲಕ್ಷಗಳ ಅನುದಾನವನ್ನು ಬ್ಯಾಚ್-III ರ ಯೋಜನೆಗಳಿಗೆ ಬಿಡುಗಡೆ ಮಾಡಿ, 2020-21 ನೇ ಸಾಲಿನ ಕ್ರಿಯಾ ಯೋಜನೆಯ ಪ್ರಕಾರ ನಿಯಾಮಾನಯಸಾರ ವೆಚ್ಚ ಭರಿಸಲು ಸೂಚಿಸಿದೆ.

ರೂ.ಲಕ್ಷಗಳಲ್ಲಿ

| ಕ್ರಸಂ | ಜಿಲ್ಲೆ | ಬಿಡುಗಡೆ ಮಾಡಲಾದ ಅನುದಾನ (ಬ್ಯಾಚ್-3) |
|---|---|---|
| 1. | ಬೆಂಗಳೂರು | 8.00 |
| 2. | ಚಾಮರಾಜನಗರ | 56.96 |
| 3. | ಕೊಡಗು | 44.00 |
| 4. | ಹಾಸನ | 67.80 |
| 5. | ಶಿವಮೊಗ್ಗ | 31.20 |
| | ಒಟ್ಟು | **207.96** |

ಈ ಮೇಲಿನಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ನಿಯಮ ಮತ್ತು ಷರತ್ತುಗಳ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು.

1. ಬಿಡುಗಡೆಯಾದ ಅನುದಾನವನ್ನು ಉಲ್ಲೇಖಿತ ಪತ್ರ (1) ರ ಸೂಚನೆಗಳಂತೆ KTPP ನಿಯಾಮಾನುಸಾರ ವೆಚ್ಚ ಭರಿಸುವುದು.
2. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC) ಕಾರ್ಯಕ್ರಮದಡಿ ಕ್ರಿಯಾ ಯೋಜನೆಯ ಮತ್ತು ಅನುಮೋದಿತ ಡಿ.ಪಿ.ಆರ್ ಮಿತಿಯೊಳಗೆ ವೆಚ್ಚ ಭರಿಸಲು ಕ್ರಮವಹಿಸುವುದು.
3. ಕೇಂದ್ರ ಸರ್ಕಾರದ ಸಾಮಾನ್ಯ ಮಾರ್ಗಸೂಚಿ-2008 (ಪರಿಷ್ಕರಿಸಿದ ಆವೃತಿ-2011) ರ ಹಾಗೂ ಜಲಾನಯನ ಯೋಜನೆಗಳ ಕಾರ್ಯಚರಣೆ ಕೈಪಿಡಿಯ ಹಾಗೂ ಕೇಂದ್ರ ಕಚೇರಿಯಿಂದ ಯೋಜನೆಯ ಅನುಷ್ಠಾನದ ಕುರಿತು ಈಗಾಗಲೇ ನೀಡಲಾದ ಸುತ್ತೋಲೆಗಳು ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು.
4. ಜಲಾನಯನ ಚಟುವಟಿಕೆ/ಕಾಮಗಾರಿಗಳನ್ನು ಅನುಮೋದಿತ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿಯೇ ಮಾತ್ರ ಅನುಷ್ಠಾನ ಮಾಡುವುದು.
5. ಜಲಾನಯನ ಚಟುವಟಿಕೆ ಮತ್ತು ಕಾಮಗಾರಿಗಳನ್ನು ಅನುಮೋದಿತ ಯೋಜನಾ ವೆಚ್ಚದ ಮಿತಿಯೊಳಗೆ ಅನುಷ್ಠಾನ ಮಾಡುವುದು. ಜಲಾನಯನ ಕಾಮಗಾರಿ ಹೊರತುಪಡಿಸಿ ಉಳಿದ ಘಟಕಗಳಡಿ ಸದರಿ ಘಟಕಗಳಿಗೆ ಸಾಮಾನ್ಯ

ಮಾರ್ಗಸೂಚಿ-2008 (ಪರಿಷ್ಕರಿಸಿದ ಆವೃತಿ-2011) ರ ಪ್ರಕಾರ ನಿಗಧಿಯಾದ ಶೇ ಮಿತಿಗಿಂತ ಹೆಚ್ಚಿನ ಅನುದಾನ ಬಳಕೆಗೆ ಅವಕಾಶವಿರುವುದಿಲ್ಲ.

6. ಖಾಸಗಿ ಭೂಮಿಯಲ್ಲಿ ಕಾರ್ಯಗತಗೊಳಿಸುವ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಸಂಭಂದಿಸಿದ ಕಾಮಗಾರಿ/ಚಟುವಟಿಕೆಗಳಿಗೆ ಕಡ್ಡಾಯವಾಗಿ ನಿಯಾಮನುಸಾರ ಫಲಾನುಭವಿ ವಂತಿಗೆಯನ್ನು ಸಂಗ್ರಹಿಸಿ ಜಲಾನಯನ ಅಭಿವೃದ್ಧಿ ನಿದಿಗೆ ಜಮಾ ಮಾಡುವುದು.

7. ಬ್ಯಾಚ್‌ವಾರು ಬಿಡುಗಡೆಯಾದ ಅನುದಾನವನ್ನು ಅವಶ್ಯಕತೆ ಇದ್ದಲ್ಲಿ ಬ್ಯಾಚ್-III & ಬ್ಯಾಚ್-IV ರ ನಡುವೆ ಅಂತರಬ್ಯಾಚ್ ಬದಲಾವಣೆ ಮಾಡಿಕೊಳ್ಳುವುದು. ಅಂತರ ಬ್ಯಾಚ್ ಬದಲಾವಣೆ ಮಾಡಿಕೊಳ್ಳುವ ಮುನ್ನ ಆಯಾ ಬ್ಯಾಚ್‌ನ ಯೋಜನೆಗಳ ಅನುಮೋದಿತ ಯೋಜನಾ ವೆಚ್ಚದ ಗರಿಷ್ಠ ಮೀತಿ ಮೀರದಂತೆ ಕ್ರಮವಹಿಸುವುದು.

8. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅಧೀನ ಕಛೇರಿಗಳಿಗೆ ಬಿಡುಗಡೆಯಾಗುವ ಅನುದಾನವು ಇಲಾಖೆಯು ಕೈಗೊಳ್ಳುವ ಆಂತರಿಕ ಆಡಿಟ್ ಮತ್ತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಕಛೇರಿಯ ಆಡಿಟ್‌ಗೆ ಒಳಪಡುತ್ತದೆ.

9. ಬಿಡುಗಡೆ ಮಾಡಲಾದ ಅನುದಾನದಿಂದ ವಾಹನಗಳು/ಪೋಟೋಕಾಪಿಯರ್/ವಿಡಿಯೋ ರೆಕಾರ್ಡರ್/ಪ್ರೊಜೆಕ್ಟರ್, ಇನ್ನಿತರೆ ಯಾವುದೇ ಕ್ಯಾಪಿಟಲ್ ವಸ್ತುಗಳನ್ನು ಖರೀದಿಸಲು ಅನುಮತಿಸಲಾಗಿರುವುದಿಲ್ಲ.

10. ಜಂಟಿ ಕೃಷಿ ನಿರ್ದೇಶಕರು/ಉಪ ಕೃಷಿ ನಿರ್ದೇಶಕರು/ಸಹಾಯಕ ಕೃಷಿ ನಿರ್ದೇಶಕರು ಎಲ್ಲಾ ಜಲಾನಯನ ಸಮಿತಿಗಳಲ್ಲಿ ಕನಿಷ್ಠ ಉಳಿಕೆ ಅನುದಾನ ಇರುವಂತೆ ಖಾತ್ರಿಪಡಿಸಿಕೊಳ್ಳಬೇಕು. ನಿಯಮಿತವಾಗಿ ಅನುಷ್ಠಾನ ಮಾಡಲಾದ ಚಟುವಟಿಕೆಗಳ ವಿವರಗಳನ್ನು ಎಂ.ಐ.ಎಸ್‌ನಲ್ಲಿ ಹಾಗೂ ಮಾಡರೇಟ್ ಮಾಡಲಾದ ಛಾಯಾ ಚಿತ್ರಗಳನ್ನು ಭುವನ್ ಪೋರ್ಟಲ್‌ನಲ್ಲಿ ತಪ್ಪದೇ ಅಪ್‌ಲೋಡ್ ಮಾಡಬೇಕು.

11. ಅನುಷ್ಠಾನ ಮಾಡುವ ಸಂಸ್ಥೆಯು (ಜಂಟಿ ಕೃಷಿ ನಿರ್ದೇಶಕರು ಕಛೇರಿ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಮತ್ತು ಜಲಾನಯನ ಸಮಿತಿಗಳು) ವೆಚ್ಚ ಮಾಡಲಾದ ವಿವರಗಳನ್ನು ಕ್ರಮಬದ್ಧವಾಗಿ ನಿರ್ವಹಣೆ ಮಾಡಬೇಕು. ಲೆಕ್ಕ ತಪಾಸಣಾ ವರದಿ ಮತ್ತು ಉಪಯೋಗಿತ ಪತ್ರವನು ಆದಷ್ಟೂ ಬೇಗ ಆರ್ಥಿಕ ವರ್ಷದ ನಂತರ ಅಂದರೆ ಆಗಸ್ಟ್ ತಿಂಗಳ ಒಳಗೆ ಸಲ್ಲಿಸಬೇಕು. ಜಂಟಿ ಕೃಷಿ ನಿರ್ದೇಶಕರು ಪ್ರತಿ ತಿಂಗಳು 5ನೇ ತಾರೀಖು ಅಥವಾ ಅದಕ್ಕೂ ಮುನ್ನ ಮಾಸಿಕ ಪ್ರಗತಿ ವರದಿಗಳನ್ನು ಭೌತಿಕ ಮತ್ತು ಆರ್ಥಿಕ ವಿವರಗಳೊಂದಿಗೆ ಕೇಂದ್ರ ಕಛೇರಿಯಿಂದ ಒದಗಿಸಲಾದ ನಮೂನೆಗಳ ಪ್ರಕಾರ ಒದಗಿಸಬೇಕು. ಅನುಷ್ಠಾನ ಮಾಡುವ ಸಂಸ್ಥೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಕರ್ನಾಟಕ ಖಜಾನೆ ಸಂಹಿತೆಯಲ್ಲಿ ಒಳಗೊಂಡಿರುವ ನಿಯಮ ಮತ್ತು ನಿಬಂಧನೆಗಳನ್ನು ತಪ್ಪದೇ ಅನುಸರಿಸಬೇಕು.

12. ಜಲವಾಹಿನಿಯ ಮೇಲ್‌ಸ್ಥರದಲ್ಲಿ ವೈಜ್ಞಾನಿಕ ಜಲಾನಯನ ಉಪಚಾರಗಳಾದ ಬದು ಕಾಮಗಾರಿ, ಬೋಲ್ಡರ್‌ತಡೆ, ರಬ್ಬಲ್‌ತಡೆ ಮತ್ತು ಸಸ್ಯತಡೆಗಳನ್ನು ನಿರ್ಮಿಸಿ ಜಲವಾಹಿನಿಯಲ್ಲಿ ಮಣ್ಣುಯುಕ್ತ ನೀರು ಬರುವುದನ್ನು ತಡೆಗಟ್ಟಬೇಕು.

13. ನೀರುಸಂಗ್ರಹಣಾ ವಿನ್ಯಾಸಗಳನ್ನು ಅನುಷ್ಠಾನಮಾಡಿದ ನಂತರ ಮಾಡಿದ ಕಾಮಗಾರಿಯ ವಿವರಗಳಾದ ಅ)ಯೋಜನೆಯ ಹೆಸರು ಆ)ಕಾಮಗಾರಿಯ ಹೆಸರು ಇ)ಅನುಷ್ಠಾನ ಮಾಡಲಾದ ವರ್ಷ ಈ)ನೀರು ಸಂಗ್ರಹಣಾ ಸಾಮರ್ಥ್ಯ ಉ)ಅಕ್ಷಾಂಶ ಮತ್ತು ರೇಖಾಂಶದ ವಿವರಗಳು ಖ)ಕಾಮಗಾರಿಯ ಅಂದಾಜು ಮೊತ್ತದ ವಿವರಗಳನ್ನು ಸಿಮೆಂಟ್‌ನಿಂದ ಪ್ಲಾಸ್ಟರಿಂಗ್ ಮಾಡುವಾಗ ಎನ್‌ಗ್ರೇವ್ ಮಾಡುವುದು ಹಾಗೂ ಪೇಂಟಿಂಗ್‌ನಲ್ಲಿ ಬರೆಯುವುದು ಹಾಗೂ/ಅಥವಾ ಪ್ರತ್ಯೇಕವಾಗಿ ನಾಮಫಲಕವನ್ನು ಹಾಕುವುದು ಕಡ್ಡಾಯ. ಇದಕ್ಕಾಗಿ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ನಿಗಧಿಪಡಿಸಬೇಕು.

14. ಜಲಾನಯನ ಕಾಮಗಾರಿ/ಚಟುವಟಿಕೆಗಳ ಅಂತಿಮ ಸಂದಾಯಕ್ಕೆ ಮುನ್ನ ನಾಮಫಲಕ ಅಳವಡಿಸುವ ಬಗ್ಗೆ, ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ಖಾತ್ರಿಪಡಿಸಿಕೊಂಡು ಅಂತಿಮ ಸಂದಾಯಕ್ಕೆ ಅನುಮೋದನೆ ನೀಡುವುದು.

15. ಪ್ರತಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗಲೇ ಒಂದು ಪ್ರತ್ಯೇಕ ಕಡತವನ್ನು ಇಟ್ಟು, ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.

| ಕ್ರಸಂ | ನಿರ್ವಹಿಸ ಬೇಕಾಗಿರುವ ದಾಖಲಾತಿಗಳು |
|---|---|
| 1 | ಕ್ಷೇತ್ರ/ಸ್ಥಳ ತಪಾಸಣಾ ವರದಿ |
| 2 | ಕಾಮಗಾರಿ/ಚಟುವಟಿಕೆ ಪೂರ್ವದ ಜಿಪಿಎಸ್‌ಯುಕ್ತ ಛಾಯಚಿತ್ರ |
| 3 | ತಾಂತ್ರಿಕ ಮಂಜೂರಾತಿ ಪಡೆದ ಆದೇಶದೊಂದಿಗೆ ಅಂದಾಜು ಪತ್ರಿಕೆ |
| 4 | ಜಲಾನಯನ ಸಮಿತಿಯ ಅನುಮತಿ/ನಡವಳಿ/ಕಾರ್ಯಾದೇಶ |
| 5 | ಅಳತೆ ಪುಸ್ತಕದಲ್ಲಿ ದಾಖಲಿಸಿದ ಪ್ರತಿ |
| 6 | ಕಾಮಗಾರಿ/ಚಟುವಟಿಕೆಯ ಅನುಷ್ಠಾನ ಹಂತದ ಜಿಪಿಎಸ್‌ಯುಕ್ತ ಛಾಯಚಿತ್ರ |
| 7 | ಬಿಲ್ಸ್ ಮತ್ತು ವೋಚರ್‌ಗಳ ಪ್ರತಿ |
| 8 | ಕಾಮಗಾರಿ ಮುಕ್ತಾಯದ ವರದಿ/ಓಕೆ ಕಾರ್ಡ್ |
| 9 | ಕಾಮಗಾರಿ/ಚಟುವಟಿಕೆ ಮುಕ್ತಾಯಗೊಂಡ ನಂತರದ ಜಿಪಿಎಸ್‌ಯುಕ್ತ ಛಾಯ ಚಿತ್ರ |

Rajan

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ

**ಇವರಿಗೆ,**

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು **ಬೆಂಗಳೂರು, ಚಾಮರಾಜನಗರ, ಹಾಸನ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆ,** ಕೃಷಿ ಇಲಾಖೆ

**ಪ್ರತಿ:**
ಮುಖ್ಯ ಲೆಕ್ಕಾಧಿಕಾಗಳು, ಕೇಂದ್ರ ಕಛೇರಿ ರವರಿಗೆ ಕಳುಹಿಸುತ್ತಾ ಈ ದಿನವೇ ಜಿಲ್ಲೆಗಳಿಗೆ ಅನುದಾನವನ್ನು ಅಪ್‌ಲೋಡ್ ಮಾಡುವುದು ಹಾಗೂ ಅನುದಾನ ಜಮೆ ಆದ ಬಗ್ಗೆ ಖಾತ್ರಿಪಡಿಸಿಕೊಂಡು ಆಯುಕ್ತರಿಗೆ ವರದಿ ನೀಡಲು ಸೂಚಿಸಿದೆ.

**ಪ್ರತಿಯನ್ನು:**
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಆಯುಕ್ತರು ಕೃಷಿ ಇಲಾಖೆ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಆಯುಕ್ತರು ಮತ್ತು ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ
4. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯಸ್ಥರು ಜಿಲ್ಲಾ ಮಟ್ಟದ ಅನುಷ್ಠಾನ ಸಂಸ್ಥೆ (DLIC) ರವರಿಗೆ ಮಾಹಿತಿಗಾಗಿ.
5. ಸಂಬಂಧಪಟ್ಟ ಜಿಲ್ಲೆಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ ಜಲಾನಯನ ಸಮಿತಿ (DLC) ರವರಿಗೆ ಮಾಹಿತಿಗಾಗಿ
6. ಸಂಬಂದಪಟ್ಟ ಜಿಲ್ಲೆಯ ಜಿಲ್ಲಾ ನೋಡಲ್ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.